# ಸೆಲೆಬ್ರಿಟಿ

■ ಹನಿ

## ಒಲಿಂಪಿಕ್ಸ್ ಕನಸು

**ಈ** ಸಲದ ಒಲಿಂಪಿಕ್ಸ್‌ಗೆ ಕ್ಷಣಗಣನೆ ಆರಂಭವಾಗಿದೆ. ವಿಶ್ವಖ್ಯಾತಿಯ ಬಿಲ್ಲುಗಾರ್ತಿ ದೀಪಿಕಾ ಕುಮಾರಿ ಎಫ್‌ಐಟಿಎ ರ‍್ಯಾಂಕಿಂಗ್‌ನಲ್ಲಿ ವಿಶ್ವದಲ್ಲೇ ನಂಬರ್ ಒನ್ ಸ್ಥಾನ ಗಳಿಸಿದ್ದು, ಈಗ ಭಾರತೀಯ ಮಹಿಳೆಯರ ಬಿಲ್ಲುಗಾರಿಕೆಯಲ್ಲೂ ಒಲಿಂಪಿಕ್ಸ್ ಚಿನ್ನ ಪಡೆಯುವ ಕನಸು ಚಿಗುರೊಡೆದಿದೆ.



ಆಟೋ ಚಾಲಕ ತಂದೆ ಮತ್ತು ನರ್ಸ್ ವೃತ್ತಿಯ ತಾಯಿಯರ ಸಂಕಷ್ಟಗಳ ಮಧ್ಯೆಯೂ ತನ್ನ ಬಿಲ್ಲುಗಾರಿಕೆಯ ಕನಸನ್ನು ಮುಚ್ಚಟೆಯಿಂದ ಸಾಕಿಕೊಂಡು ಬಂದ ಈ ರಾಂಚಿಯ ಗುಡ್ಡಗಾಡಿನ ಹುಡುಗಿ, (ಬರ್ತ್ ಡೇ 13-6-1994) ಸದ್ಯಕ್ಕೆ ಕೋಲ್ಕತ್ತಾದಲ್ಲಿ ಒಲಿಂಪಿಕ್‌ಪೂರ್ವ ಅಭ್ಯಾಸದಲ್ಲಿ ತೀವ್ರ ತೊಡಗಿಸಿಕೊಂಡಿದ್ದಾಳೆ. ದಕ್ಷಿಣ ಕೊರಿಯಾ, ಚೀನಾ ಮತ್ತು ಇಟಲಿಯ ಬಿಲ್ಲುಗಾರ್ತಿಯರ ತೀವ್ರಸ್ಪರ್ಧೆಯನ್ನು ಈಕೆ ಎದುರಿಸುವುದಂತೂ ನಿಜ. ಕಳೆದ ಕಾಮನ್‌ವೆಲ್ತ್ ಕೂಟದಲ್ಲಿ ದಕ್ಷಿಣ ಕೊರಿಯಾದ ಬಿಲ್ಲುಗಾರ್ತಿಯರನ್ನು ಸೋಲಿಸಿದರೂ ಚೀನಾದವರು ಅಜೇಯರಾಗಿ ಉಳಿದಿದ್ದು ಸುಳ್ಳಲ್ಲ. ಭಾರತದ ಇನ್ನೊಬ್ಬ ಪ್ರತಿಭಾವಂತ ಬಿಲ್ಲುಗಾರ್ತಿ ಪೂರ್ಣಿಮಾ ಮಹತೊ ಕೋಚಿಂಗ್ ನೀಡುತ್ತಿರುವುದರಿಂದ ದೀಪಿಕಾ ಪದಕದ ಮೇಲೆ ಕಣ್ಣಿಟ್ಟಿರುವುದು ಸಹಜವಾಗಿಯೇ ಇದೆ. 'ಚಿಕ್ಕಂದಿನಲ್ಲಿ ಮರದ ಮೇಲಿನ ಮಾವಿನ ಹಣ್ಣಿಗೆ ಈಕೆ ಇಟ್ಟ ಕಲ್ಲೇಟಿನ ಗುರಿ ಎಂದೂ ತಪ್ಪಿಲ್ಲ' ಎಂದು ಈಗಲೂ ಸಂಭ್ರಮಿಸುವ ತಾಯಿ-ತಂದೆಯರು ಮಗಳ ಹೊಸ ಸಾಧನೆ ನೋಡಿ ಪುಳಕಿತರಾಗಿದ್ದಾರೆ. 'ಸದ್ಯಕ್ಕೆ ಒಲಿಂಪಿಕ್ಸ್ ಪದಕವೊಂದೇ ಗುರಿ. ಅಲ್ಲಿಂದ ಬಂದ ಮೇಲೆ ಪಿಯುಸಿ ಪಾಸು ಮಾಡಬೇಕು' ಎನ್ನುತ್ತಾಳೆ ಈಕೆ!

## ಕಾಕಾ ಸಂಕಷ್ಟ!

**ಕ**ಳೆದ ವಾರವಿಡೀ ರಾಜೇಶ್ ಖನ್ನಾನದ್ದೇ ಸುದ್ದಿ! 'ತುಂಬಾ ಹುಷಾರಿಲ್ಲವಂತೆ. ಆಹಾರ ಕೂಡಾ ಸೇವಿಸಲು ಆಗುತ್ತಿಲ್ಲವಂತೆ. ಬರೀ ದ್ರವಾಹಾರ ಹೋಗುತ್ತದಂತೆ' ಎಂದು ಸುದ್ದಿ ಸಂಸ್ಥೆಯೊಂದು ಪ್ರಕಟಿಸಿದ್ದೇ ತಡ, ಮುಂಬೈಯ ಬಾಂದ್ರಾದಲ್ಲಿರುವ 'ಆಶೀರ್ವಾದ'ದ ಮುಂದೆ ಜನಸಾಗರ ಸೇರಿತು! ದೇಶದ ಹಲವೆಡೆ ಆರೋಗ್ಯಕ್ಕೆ ಪೂಜೆ, ಪ್ರಾರ್ಥನೆಗಳು ನಡೆದವು. ನಾಲ್ಕೈದು ದಿನಗಳ ಆತಂಕದ ಬಳಿಕ 'ಆಶೀರ್ವಾದ'ದ ಬಾಲ್ಕನಿಯಲ್ಲಿ ಮಗಳು ಟ್ವಿಂಕಲ್ ಮತ್ತು ಅಳಿಯ ಅಕ್ಷಯ ಕುಮಾರ್ ಜತೆಗೆ ಬಂದು ನಿಂತ ಕಾಕಾ ರಾಜೇಶ್, ಕೈಬೀಸಿದಾಗಲೇ ಅಭಿಮಾನಿಗಳ ಮನದಲ್ಲಿ ನೆಮ್ಮದಿ ಮೂಡಿದ್ದು!

ಬಾಲಿವುಡ್‌ನ 'ಮೊದಲ ಸೂಪರ್‌ಸ್ಟಾರ್' ಈ ಖನ್ನಾ. 70ರ ದಶಕದಲ್ಲಿ ಈತನ ಸಾವಿರಾರು ಅಭಿಮಾನಿಗಳ ಹುಚ್ಚು ಎಷ್ಟಿತ್ತೆಂದರೆ ಈತನ ಫೋಟೋ ಜತೆಗೆ ಮದುವೆಯಾದವರಿದ್ದರು! ಪ್ರತಿ ದಿನ 'ಆಶೀರ್ವಾದ್' ಮುಂದೆ ರಾಜೇಶ್ ಖನ್ನಾನ ಮುಖ ನೋಡಲು ನೂರಾರು ಹುಡುಗಿಯರು ಬಂದು ನಿಲ್ಲುತ್ತಿದ್ದರು. ಈಗ 69ರ ಹರೆಯದ ರಾಜೇಶ್ ಖನ್ನಾ (ಬರ್ತ್‌ಡೇ 29-12-1942) ದೈಹಿಕವಾಗಿ ಸಾಕಷ್ಟು ಜೀರ್ಣವಾಗಿದ್ದಾರೆ. ಅದಕ್ಕೆ ಮುಖ್ಯ ಕಾರಣವಾಗಿದ್ದುದು 'ನಿಯಂತ್ರಣವಿಲ್ಲದ ಅತಿಯಾದ ಕುಡಿತ' ಎಂದು ಅವರೇ ಹೇಳಿದ್ದಿದೆ.



ಅದು 1966. ಮುಂಬೈಯ ಪ್ರಖ್ಯಾತ ಸಿನಿಮಾ ನಿರ್ಮಾಣ ಸಂಸ್ಥೆಯೊಂದು ಹೊಸ ಸಿನಿಮಾದ ಹೀರೊ ಹುದ್ದೆಗೆ ಯುವಕರನ್ನು ಸಂದರ್ಶನಕ್ಕೆ ಕರೆದಾಗ ಬಂದು ಸೇರಿದವರ ಸಂಖ್ಯೆ 10 ಸಾವಿರವನ್ನು ದಾಟಿತ್ತು. ಅಷ್ಟೆಲ್ಲ ಜನರನ್ನು ಸಂದರ್ಶನದಲ್ಲಿ ಹಿಂದಿಕ್ಕಿ ಆ ಸಿನಿಮಾದ ನಾಯಕ ಪಟ್ಟಕ್ಕೆ ಆಯ್ಕೆಯಾದಾತ ಜತಿನ್ ಖನ್ನಾ! ಆ ಸಿನಿಮಾದ ಹೆಸರು 'ಆಖ್ರೀ ಖತ್'. ಸಿನಿಮಾ ಶೂಟಿಂಗ್ ನೊಂದಿಗೇ ಜತಿನ್ ಹೆಸರು ರಾಜೇಶ್ ಖನ್ನಾ ಎಂದು ಬದಲಾಯಿತು. ಅದೃಷ್ಟವೂ ಖುಲಾಯಿಸಿತು. ಒಂದರ ಹಿಂದೆ ಒಂದರಂತೆ ಚಿತ್ರಗಳು ಹಿಟ್ ಆಗತೊಡಗಿದವು. ರಾಜೇಶ್ ಖನ್ನಾ ಎನ್ನುವ ಹೆಸರು ದೇಶದಾದ್ಯಂತ ಚಿತ್ರರಸಿಕರ ನಾಲಗೆಯ ಮೇಲೆ ನಲಿದಾಡಿತು. 60- 70ರ ದಶಕದಲ್ಲಂತೂ ಈತ ಏಕಾಂಗಿ ನಾಯಕನಾಗಿ ನಟಿಸಿದ 15 ಸಿನಿಮಾಗಳು ಒಂದರ ಹಿಂದೆ ಒಂದರಂತೆ ಸೂಪರ್‌ಹಿಟ್ ಆದದ್ದು ಇವತ್ತಿಗೂ ಬಾಲಿವುಡ್‌ನ ಅತಿದೊಡ್ಡ ದಾಖಲೆಯಾಗಿಯೇ ಉಳಿದಿದೆ. ರಾಸ್, ದೋ ರಾಸ್ತೆ, ಆರಾಧನಾ, ಬಹಾರೋಂ ಕೆ ಸಪ್ನೆ, ಇತ್ತಿಫಾಖ್, ಹಾಥಿ ಮೇರೆ ಸಾಥಿ- ಮುಂತಾದ ಸಿನಿಮಾಗಳನ್ನು ಜನ ಮುಗಿಬಿದ್ದು ನೋಡಿದರು.'ಆರಾಧನಾ' ಅಂತೂ ಸಾರ್ವಕಾಲಿಕ ಹಿಟ್ ಚಿತ್ರಗಳ ಸಾಲಿಗೆ ಸೇರಿತು. ಒಂದೆಡೆ ಶರ್ಮಿಳಾ ಠಾಗೋರ್, ಇನ್ನೊಂದೆಡೆ ಫರೀದಾ ಜಲಾಲ್; ಇಬ್ಬರ ಮಧ್ಯೆ ರಾಜೇಶ್ ಖನ್ನಾ ನಟನೆಯನ್ನೂ ಆಗಿನ ಪೀಳಿಗೆಯವರು ಈಗಲೂ ರೋಮಾಂಚನದೊಂದಿಗೆ ಸ್ಮರಿಸುತ್ತಾರೆ.

ಕಾಲೇಜಿನಲ್ಲಿದ್ದಾಗ ಜಿತೇಂದ್ರ ಈತನ ಸಹಪಾಠಿ. ನಾಟಕಗಳಲ್ಲಿ, ಸಿನಿಮಾಗಳಲ್ಲಿ ಅವಕಾಶ ಅರಸಿಕೊಂಡು ಇಬ್ಬರೂ ಸಾಕಷ್ಟು ಅಲೆದಿದ್ದರಂತೆ. ಒಮ್ಮೆ ಸೂಪರ್‌ಸ್ಟಾರ್ ಆದ ಬಳಿಕ ರಾಜೇಶ್ ಖನ್ನಾನೇ ಹಲವರಿಗೆ ಕರೆದು ಅವಕಾಶ ಕೊಟ್ಟದ್ದಿದೆ. ಬಾಲಿವುಡ್‌ನ 70-80ರ ದಶಕದ ಪ್ರಖ್ಯಾತ ಚಿತ್ರಕಥೆ ಜೋಡಿ ಸಲೀಂ-ಜಾವೇದ್‌ರನ್ನು ಮೊದಲ ಬಾರಿಗೆ 1971ರಲ್ಲಿ ಕರೆದು 'ಹಾಥಿ ಮೇರೆ ಸಾಥಿ'ಯಲ್ಲಿ ಅವಕಾಶ ಕೊಟ್ಟದ್ದೇ ಈ ಕಾಕಾ. 74ರಲ್ಲೇ ಬಿಬಿಸಿ ಈತನ ಕುರಿತು 'ಬಾಂಬೆ ಸೂಪರ್‌ಸ್ಟಾರ್' ಎಂಬ ಸಾಕ್ಷ್ಯಚಿತ್ರ ಮಾಡಿತ್ತು. ಬಾಂಬೆ ಯೂನಿವರ್ಸಿಟಿ ಪಠ್ಯಪುಸ್ತಕದಲ್ಲಿ ರಾಜೇಶ್ ಖನ್ನಾನ ಚರಿಷ್ಮಾದ ಬಗ್ಗೆ ಪಾಠವೊಂದನ್ನು ಸೇರಿಸಲಾಗಿತ್ತು!

1992-96ರಲ್ಲಿ ಎರಡು ಬಾರಿ ಕಾಂಗ್ರೆಸ್ ಟಿಕೆಟ್‌ನಿಂದ ಲೋಕಸಭೆಗೆ ಆಯ್ಕೆಯಾದ ರಾಜೇಶ್ ಖನ್ನಾ ಜೀವನಸಂಗಾತಿಯ ಆಯ್ಕೆಯ ವಿಷಯದಲ್ಲಿ ಗೊಂದಲಕ್ಕೆ ಒಳಗಾದದ್ದು ಮಾತ್ರ ಕುತೂಹಲಕರ. ಆರಂಭದಲ್ಲಿ ಅಂಜು ಮಹೇಂದ್ರ ಜತೆ 7 ವರ್ಷ ಸಹಬಾಳ್ವೆ ಮಾಡಿದ ಕಾಕಾ, 73ರಲ್ಲಿ ಡಿಂಪಲ್ ಕಪಾಡಿಯಾರನ್ನು ಮದುವೆಯಾದರು. 84ರಲ್ಲಿ ಡಿಂಪಲ್ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿ ಬೇರೆಯಾದ ಬಳಿಕ 80ರ ದಶಕದಲ್ಲಿ ಟೀನಾ ಮುನಿಮ್ ಜತೆ ಪ್ರೇಮ ಪ್ರಕರಣ ಮುಂದುವರಿಯಿತು. ಟೀನಾ ವಿದ್ಯಾಭ್ಯಾಸದ ನೆಪದಲ್ಲಿ ವಿದೇಶಕ್ಕೆ ಹಾರಿದ ಬಳಿಕ ರಾಜೇಶ್ ಖನ್ನಾ ಏಕಾಂಗಿಯಾದರು. ಕೆಲವು ವರ್ಷಗಳ ಬಳಿಕ ಮತ್ತೆ ಡಿಂಪಲ್ ಮತ್ತು ರಾಜೇಶ್ ನಡುವೆ ಸ್ನೇಹ ಕುದುರಿತು. ವಿಚ್ಛೇದನದ ಪ್ರಕ್ರಿಯೆ ಆಗ ಪೂರ್ಣವಾಗಿಲ್ಲದ್ದರಿಂದ ಈಗಲೂ ಅವರ ಸಂಬಂಧ ಮುಂದುವರಿದಿದೆ. ಮನೆ ಬೇರೆಯಾಗೇ ಇದ್ದರೂ ಮನಸ್ಸು ಒಂದಾಗಿದೆ. ಇಳಿಗಾಲದಲ್ಲಿ ಆರೋಗ್ಯ ಮರಳಿ ಗಳಿಸಲು ಕಾಕಾಗೆ ಈ ಸಾಂಗತ್ಯ ಸಹಕಾರಿಯಾಗಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65